



## ಎಲೆಯೊಳಗೆ ಸೂರು ಕಟ್ಟಿದ ಸಿಂಪಿಗ

ಮನೆಯ ಎದುರಿನ ಕಾಡುಬಾದಾಮಿ ಗಿಡದ ಕೆಲವು ರೆಂಬೆಗಳನ್ನು ಕತ್ತರಿಸಿದಾಗ ಚಿತ್ರದಲ್ಲಿ ಕಾಣುತ್ತಿರುವ ಈ ಎಲೆ ಕೂಡ ಉದುರಿಬಿತ್ತು. ಎತ್ತಿ ನೋಡಿದರೆ ಎಲೆಯ ಹಿಂಬದಿಯಲ್ಲಿ ಗೂಡಿತ್ತು. ಅದೃಷ್ಟವಶಾತ್ ಅದರಲ್ಲಿ ಮೊಟ್ಟೆಗಳಾಗಲಿ, ಮರಿಗಳಾಗಲಿ ಇರಲಿಲ್ಲ. ಆದರೆ ಎಂದೋ ಒಡೆದು ಹೋದ ಮೊಟ್ಟೆ ಚೂರುಗಳು ಸಿಕ್ಕವು. ಮರದ ಕೊಂಬೆ ಕಡಿಯುವಾಗ ಆದಷ್ಟು ಪರಿಶೀಲಿಸಿ ಕಡಿಯುವುದು ಒಳ್ಳೆಯದು ಎಂಬ ಪಾಠವೂ ಸಿಕ್ಕಿತೆನ್ನಿ.

ಇದು ಸಿಂಪಿಗ ಅಥವಾ ದರ್ಜಿ ಹಕ್ಕಿಯ ಗೂಡು. ಒಂದೇ ಎಲೆಯನ್ನು ಅಥವಾ ಎರಡು ಎಲೆಗಳನ್ನು ಬಾಗಿಸಿ, ತನ್ನ ಕೊಕ್ಕನ್ನೇ ಸೂಜಿಯಂತೆ ಬಳಸಿ, ಸಸ್ಯಗಳ ನಾರು ಜೋಡಿಸಿ ಗೂಡು ಹೊಲಿಯುತ್ತದೆ. ಈ ಹೊಲಿಗೆಯ ಲಕ್ಷಣವನ್ನು ಹೊಂದಿರುವ ಕಾರಣಕ್ಕಾಗಿಯೇ ಈ ಹಕ್ಕಿಗೆ ಸಿಂಪಿಗ ಎಂಬ ಹೆಸರು ಬಂದಿದೆ. ಏಷ್ಯಾ ಖಂಡದಲ್ಲಿ ಕಂಡುಬರುವ ಪುಟ್ಟ ಗಾತ್ರದ ಈ ಹಕ್ಕಿ, ಸಾಮಾನ್ಯವಾಗಿ ಹಸಿರು ಮಿಶ್ರಿತ ಹಳದಿ ಮೈಬಣ್ಣ ಹೊಂದಿರುತ್ತದೆ. ಇದರಲ್ಲಿ 13 ಪ್ರಭೇದಗಳಿದ್ದು ಮಳೆ, ಗಾಳಿ, ಚಳಿಯಿಂದ ರಕ್ಷಣೆ ಪಡೆಯುವಂತೆ ಹಾಗೂ ವೈರಿಗಳ ಕಣ್ಣಿಗೆ ಕಾಣದಂತೆ ಈ ರೀತಿ ಗೂಡು ನಿರ್ಮಿಸುತ್ತವೆ. ಈ ಪಕ್ಷಿಗಳ ಗೂಡನ್ನು ನೋಡಿದರೆ ಕುವೆಂಪು ಅವರ 'ಮನೆ ಮನೆ ಮುದ್ದು ಮನೆ' ಹಾಡು ನೆನಪಾಗದೇ ಇರದು.

**–ಸುಘೋಷ ಸ. ನಿಗಳೆ, ಬೆಂಗಳೂರು**

## ಇಲಿಗೂ ಇದೆ ದೇಗುಲ



ಇಲಿಗಳಿಂದ ಇಲಿ ಜ್ವರ, ಲೆಪ್ಟೊಸ್ಪಿರೋಸಿಸ್, ಪ್ಲೇಗ್ ಮುಂತಾದ ರೋಗ ಹರಡುವ ಅಪಾಯವಿರುವುದರಿಂದ ಸಾಮಾನ್ಯವಾಗಿ ನಾವು ಅವುಗಳನ್ನು ಹತ್ತಿರ ಸೇರಿಸಿಕೊಳ್ಳುವುದಿಲ್ಲ. ಆದರೆ ಇಲ್ಲೊಂದು ದೇವಸ್ಥಾನದಲ್ಲಿ ಭಕ್ತರು ಇಲಿಗಳನ್ನು ಪವಿತ್ರವೆಂದು ಪೂಜಿಸುತ್ತಾರೆ. ಮಾತ್ರವಲ್ಲದೆ ಇಲ್ಲಿನ ದೇವಿಗೆ ಅರ್ಪಿಸಿದ ಪ್ರಸಾದವನ್ನು ಮೊದಲು ಅವುಗಳಿಗೆ ನೀಡಿ ನಂತರ ತಾವು ಸ್ವೀಕರಿಸುತ್ತಾರೆ.

ರಾಜಸ್ಥಾನದ ಬಿಕಾನೇರ್ ನಿಂದ 30 ಕಿ.ಮೀ. ದೂರದಲ್ಲಿರುವ ದೇಶ್ನೋಕೆ ಎಂಬಲ್ಲಿರುವ 'ಕರ್ಣಿ ಮಾತಾ' ದೇವಾಲಯವು 'ಇಲಿ ದೇವಾಲಯ' ಎಂದೇ ಪ್ರಸಿದ್ಧವಾಗಿದೆ. ಅಮೃತಶಿಲೆಯಿಂದ ನಿರ್ಮಿಸಿರುವ ಈ ದೇವಾಲಯವು ಬೆಳ್ಳಿ ಮತ್ತು ಚಿನ್ನದ ಗುಮ್ಮಟ, ಮಂಟಪ ಮತ್ತು ಫಲಕಗಳನ್ನು ಹೊಂದಿದೆ. ವಿಶೇಷವೆಂಬಂತೆ ಈ ದೇವಾಲಯದ ಆವರಣದಲ್ಲಿ ಹೆಚ್ಚಿನ ಸಂಖ್ಯೆಯ ಇಲಿಗಳು ವಾಸಿಸುತ್ತವೆ. ಅಚ್ಚರಿಯ ವಿಷಯವೆಂದರೆ, ಯಾತ್ರಿಕರು ಬರಿಗಾಲಿನಲ್ಲಿದ್ದಾಗಲೂ ಅವು ಯಾರನ್ನೂ ಕಚ್ಚುವುದಿಲ್ಲ. ಇಷ್ಟೊಂದು ಇಲಿಗಳು ಅಲ್ಲಿದ್ದರೂ, ಈ ತನಕ ಯಾವುದೇ ರೋಗ ಹರಡಿಲ್ಲ ಮತ್ತು ಅವುಗಳು ಸೇವಿಸಿ ಮಿಗಿಸಿದ ಪ್ರಸಾದವನ್ನು ಸ್ವೀಕರಿಸಿದ ಯಾವುದೇ ಭಕ್ತರು ಅನಾರೋಗ್ಯಕ್ಕೆ ಒಳಗಾಗಿಲ್ಲ.

ಸಾಮಾನ್ಯವಾಗಿ ಕಪ್ಪು ಮೂಷಿಕಗಳಿರುವ ಇಲ್ಲಿ ಅಪರೂಪವೆನಿಸುವ ಬಿಳಿ ಮೂಷಿಕವನ್ನೇನಾದರೂ ಅಕಸ್ಮಾತ್ ನೋಡಿದರೆ ಅದೃಷ್ಟವೆನ್ನಲಾಗುತ್ತದೆ. ಸ್ಥಳೀಯ ಜಾನಪದ ದಂತಕಥೆಯ ಪ್ರಕಾರ, ದೇವಿಯು ತನ್ನ ಅನುಯಾಯಿಗಳಲ್ಲಿ ಒಬ್ಬನನ್ನು ಯಮನ ಹಿಡಿತದಿಂದ ಮರಳಿ ತರಲು ದೀರ್ಘ ತಪಸ್ಸು ಮಾಡಿದ್ದಳು. ಆದರೆ ಆ ವ್ಯಕ್ತಿ ಅದಾಗಲೇ ಇಲಿಯಾಗಿ ಜನ್ಮ ತಾಳಿರುವುದರಿಂದ ಯಮದೇವರು ಕರ್ಣಿ ಮಾತೆಗೆ ವರವೊಂದನ್ನು ನೀಡಿದರು. ಆ ಪ್ರಕಾರ ಅವಳ ಎಲ್ಲಾ ಅನುಯಾಯಿಗಳು ತಮ್ಮ ಮರಣದ ನಂತರ ಇಲಿಗಳಾಗಿ ಹುಟ್ಟುತ್ತಾರೆ. ಆದರೆ ಅವರು ಮರಳಿ ತಮ್ಮ ಸ್ವಂತ ಕುಲಗಳಲ್ಲಿ ಮನುಷ್ಯರಾಗಿ ಪುನರ್ಜನ್ಮ ಪಡೆಯುವವರೆಗೆ ಮಾತ್ರ ಇಲಿಗಳಾಗಿರುತ್ತಾರೆ. ಇದೇ ಕಾರಣದಿಂದ ಇಲ್ಲಿ ಇಲಿಗಳಿಗೆ ಮಾನ್ಯತೆ ನೀಡಲಾಗಿದೆ.

**–ರಮಣ್ ಶೆಟ್ಟಿ ರೆಂಜಾಳ, ಮುಂಬೈ**

